# ಇಸ್ಸಾನ ಹಾಯ್ಕುಗಳು

ಕರುಣಾಳು ಗಾಳಿ
ಗುಡಿಸುತಿದೆ ನನ್ನ
ಕೊಳಕು ಗುಡಿಸಲನ್ನು

★

ಗುಡಿಸಲ ಬಾಗಿಲಲ್ಲಿರುವ ಜಿಂಕೆಯ
ಕೊಂಡೊಯ್ಯದಿರು ನನ್ನ
ಹಾಯ್ಕುಗಳ ಸಂಕಲನ!

★

ಪೈನ್ ಮರವೇ
ನನ್ನ ಜೋಪಡಿಯ ಕೀಲಿಕೈ ಜೋಪಾನ!
ಓಡುತ್ತಿರುವ ಚಂದ್ರ ನೋಡುತ್ತಿದ್ದಾನೆ

★

ಗೋಡೆಯಲ್ಲಿ ರಂಧ್ರ –
ಒಳಬರುವನು
ಸುಗ್ಗಿಯ ಚಂದ್ರ

★

ಪತರುಗುಟ್ಟುವ ಚಿಟ್ಟೆ
ಶೋಧಿಸಿದ್ದಾಯಿತು
ನನ್ನ ಗುಡಿಸಲ ಮೂಲೆ ಮೂಲೆ

★

ಮಲಗಿಬಿಟ್ಟದೆ ಚಿಟ್ಟೆ
ತಲೆದಿಂಬು ಮಾಡಿಕೊಂಡು
ನನ್ನ ತೋಳನ್ನೆ

★

ಕಪ್ಪೆಯೂ ನಾನೂ
ಮುಳುಗಿಹೋಗಿದ್ದೇವೆ
ದೃಷ್ಟಿಸುವ ಸ್ಪರ್ಧೆಯಲ್ಲಿ

★

ಆ ಮೋಡ ಒಡೆಯಲು
ಮೂರು ದಿನ ಕಾದಿವೆ
ಮೂರು ಹನಿಗಳು

★

ಬಿತ್ತೊಂದು ಮಳೆಯ ಹನಿ
ತಲೆಯುಜ್ಜಿಕೊಳ್ಳುತ್ತಿರುವ
ಮರಗಪ್ಪೆ

★

ಕಪ್ಪೆಯ ಸವಾರನ ಜೊತೆ
ಕೆಳಗೆ ಬೀಳುತ್ತೆ
ಎಲೆ

★

ಬೆಟ್ಟದ ಕೋಗಿಲೆ ಹಾಡುತ್ತಿದೆ
ಮಂಡೂಕರಾಯನ
ಅಂತಿಮ ಸಂಸ್ಕಾರದಲ್ಲಿ

★

ಬೆಟ್ಟದ ಕೋಗಿಲೆಯ ಕುಹೂ
ಕೇಳುವುದೇ
ಪಂಜರದ ಕೋಗಿಲೆಗೆ

★

ಚಕ್ರವರ್ತಿಗೂ ಕೂಡ
ಅದೇ ಹಾಡ
ಹಾಡುತ್ತದೆ ಕೋಗಿಲೆ

★

ನನ್ನ ಗಲ್ಲದ ಮೇಲಿರುವ
ಅಕ್ಕಿಗಾಗಿ ಚಿಲಿಪಿಲಿಯೆನುವ
ಮರಿಗುಬ್ಬಚ್ಚಿ

★